**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

<u>ಸತ್ರ ಮೊಕದ್ದಮೆ ನಂಃ **95/2024**</u>

| | | |
|---|---|---|
| ಸಾಕ್ಷಿದಾರರ ಹೆಸರು | - ಕೃಷ್ಣಶೆಟ್ಟಿ | ಪಿಡಬ್ಲ್ಯೂ- 05 |
| ತಂದೆಯ ಹೆಸರು | - ಗೋವಿಂದಶೆಟ್ಟಿ | ಸಿಡಬ್ಲ್ಯೂ- 08 |
| ವಯಸ್ಸು | - 52 ವರ್ಷ | |
| ಉದ್ಯೋಗ | - ಹೋಟೆಲ್ ವ್ಯಾಪಾರ | |
| ವಾಸ ಸ್ಥಳ | - ಚಿಕ್ಕಮಗಳೂರು | |

ದಿನಾಂಕಃ 10.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

*(ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು, ಆತನನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)*

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ಈ ದಿನ ವಿಡಿಯೋ ಕನ್ಫಾರೇನ್ಸಿಂಗ್ ಮುಖಾಂತರ ಹಾಜರು ಪಡಿಸಿದ ಆರೋಪಿ ಗೊತ್ತು. ಸಹ ಪಂಚರಾದ ಚಾಸಾ.7 ಗೊತ್ತು.

2. 2024 ನೇ ಇಸವಿ ಮೇ ತಿಂಗಳಿನಲ್ಲಿ ಒಂದು ದಿನ ನಗರ ಠಾಣೆಯ ಪೊಲೀಸರು ನನ್ನನ್ನು ಮತ್ತು ಚಾಸಾ.7 ರವರನ್ನು ತಮ್ಮ ಠಾಣೆಗೆ ಕರೆಸಿದ್ದರು. ಚಿಕ್ಕಮಗಳೂರಿನ ಐ.ಜಿ. ರಸ್ತೆಯ ಫುಟಪಾತಿನಲ್ಲಿ ಒಬ್ಬ ಮಹಿಳೆಯ ಕೊಲೆಯಾಗಿದ್ದ ಬಗ್ಗೆ ಸಾಕ್ಷಿದಾರರಾಗಿ ಸಹಕರಿಸಬೇಕೆಂದು ಪೊಲೀಸರು ನನಗೆ ಮತ್ತು ಚಾಸಾ.7 ರವರಿಗೆ ನೋಟೀಸನ್ನು ಕೊಟ್ಟರು. ಸದರಿ ನೋಟೀಸನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಟೀಸನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ನೋಟೀಸನ್ನು ನಿಪಿ.10 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.10(ಎ) ಎಂದು ಗುರುತಿಸಲಾಯಿತು. ಆ ದಿನ ಠಾಣೆಯಲ್ಲಿ ಆರೋಪಿ ಪೊಲೀಸರ ವಶದಲ್ಲಿದ್ದನು.

3. ನಂತರ ಪೊಲೀಸರು ನನ್ನನ್ನು, ಚಾಸಾ.7 ಮತ್ತು ಆರೋಪಿಯನ್ನು ಚಿಕ್ಕಮಗಳೂರಿನ ಐ.ಜಿ. ರಸ್ತೆಯಲ್ಲಿರುವ ಸುಪ್ರೀಂ ಮೆಡಿಕಲ್ಸ್ ಹತ್ತಿರ ಇರುವ ಫುಟಪಾತಿನಲ್ಲಿ ಕೊಲೆಯಾಗಿದ್ದ ಸ್ಥಳಕ್ಕೆ ಕರೆದುಕೊಂಡು ಹೋದರು. ಸದರಿ ಸ್ಥಳವನ್ನು ಆರೋಪಿಯೇ ನಮಗೆ ತೋರಿಸಿದನು. ಸದರಿ ರಸ್ತೆಯ ಫುಟಪಾತಿನಲ್ಲಿ ಬಟ್ಟೆಗಳು, ಪ್ಲಾಸ್ಟಿಕ್ ಚೀಲ ಮತ್ತು ಮತ್ತು ವಸ್ತುಗಳ ಮಧ್ಯದಲ್ಲಿದ್ದ ಒಂದು ಸೈಜ್ ಕಲ್ಲನ್ನು ಆರೋಪಿ ತೆಗೆದು ತೋರಿಸಿ ಅದೇ ಕಲ್ಲನ್ನು ಮಹಿಳೆಯ ತಲೆಯ ಮೇಲೆ ಎತ್ತಿ ಹಾಕಿ ಆಕೆಯ ಕೊಲೆ ಮಾಡಿದ್ದಾಗಿ ತಿಳಿಸಿದನು. ಆ ಬಗ್ಗೆ ಪೊಲೀಸರು ಮಹಜರ್ ಬರೆದುಕೊಂಡು ಸದರಿ ಕಲ್ಲನ್ನು ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡರು. ಸದರಿ ಮಹಜರನ್ನು ಪೊಲೀಸರು

ಮಧ್ಯಾಹ್ನ 3.30 ಗಂಟೆಯಿಂದ 4.30 ಗಂಟೆಯವರೆಗೆ ಬರೆದುಕೊಂಡಿದ್ದಾರೆ. ಸದರಿ ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಈಗಾಗಲೇ ಮು.ಮಾ.6 ಎಂದು ಗುರುತಿಸಲ್ಪಟ್ಟಿರುವ ಸೈಜ್ ಕಲ್ಲನ್ನು ನೋಡಿ ಆ ದಿನ ಆರೋಪಿ ಪೊಲೀಸರಿಗೆ ಹಾಜರುಪಡಿಸಿದ ಕಲ್ಲು ಅದೇ ಎಂದು ನುಡಿದಿರುತ್ತಾರೆ. ಮು.ಮಾ.6 ರ ಮೇಲೆ ಅಂಟಿಸಿರುವ ಚೀಟಿಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಸಹಿಯನ್ನು ಮು.ಮಾ.6(ಎ) ಎಂದು ಗುರುತಿಸಲಾಯಿತು.

4. ಸದರಿ ಮಹಜರಿಗೆ ನಾನು, ಚಾಸಾ.7 ಮತ್ತು ಆರೋಪಿ ಸಹಿ ಮಾಡಿದ್ದೇವೆ. ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಮಹಜರನ್ನು ನಿ.ಪಿ.11 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.11(ಎ) ಎಂದು ಗುರುತಿಸಲಾಯಿತು.

5. ಸಾಕ್ಷಿಗೆ 2 ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಅವುಗಳನ್ನು ಪೊಲೀಸರು ಮೇಲೆ ಹೇಳಿದಂತೆ ಮಹಜರ್ ಬರೆದುಕೊಂಡ ಸ್ಥಳ ಮತ್ತು ಸಮಯದಲ್ಲಿ ತೆಗೆದಿದ್ದಾಗಿ ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ.12 ಮತ್ತು ಪಿ.13 ಎಂದು ಗುರುತಿಸಲಾಯಿತು. ಸದರಿ ಫೋಟೋಗಳಲ್ಲಿ ನನ್ನೊಂದಿಗೆ

ಚಾಸಾ.7, ಆರೋಪಿ ಮತ್ತು ಪೊಲೀಸರ ಇರುವಿಕೆ ಕಂಡುಬರುತ್ತದೆ.

<u>ಪಾಟೀ ಸವಾಲುಃ **LADCS** ನ **Deputy Chief Defense counsel** ಆದ ಶ್ರೀ ಎನ್ ಡಿ ವಕೀಲರಿಂದಃ ಆರೋಪಿ ಪರವಾಗಿಃ</u>

6. ಚಾಸಾ.7 ರವರು ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನ್ನನ್ನು ಪೊಲೀಸರು ಕರೆದಂತೆ ಅವರನ್ನು ಸಹ ಕರೆಸಿದ್ದರು, ಅವರು ಯಾರು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪೊಲೀಸರು ನಿಮಗೆ ನೋಟೀಸನ್ನು ಕೊಟ್ಟಾಗ ನೀವು ಎಲ್ಲಿದ್ದೀರಿ ಎಂದರೆ ಸಾಕ್ಷಿ ಠಾಣೆಯಲ್ಲಿ ಎನ್ನುತ್ತಾರೆ. ಪೊಲೀಸರು ನಿಮಗೆ ಹೇಗೆ ಪರಿಚಯ ಎಂದರೆ ಸಾಕ್ಷಿ ನಾನು ಹೋಟೆಲ್ ನಡೆಸುವವನು, ಐ.ಜಿ. ರಸ್ತೆಯಲ್ಲೇ ನನ್ನ ಹೋಟೆಲ್ ಇದೆ, ಹಾಗಾಗಿ ನನಗೆ ಪೊಲೀಸರ ಪರಿಚಯ ಇದೆ ಎನ್ನುತ್ತಾರೆ. ಪೊಲೀಸರ ಮೇಲೆ ನಿಮಗೆ ವಿಶ್ವಾಸ ಇರುವ ಕಾರಣ ನೀವು ಅವರು ಕರೆದಾಗ ಹೋಗುತ್ತೀರಿ ಎಂದರೆ ಸರಿ. ಇದೇ ರೀತಿ ನೀವು ಎಷ್ಟು ಬಾರಿ, ಎಷ್ಟು ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸಾಕ್ಷಿ ನಾನು ಕೋರ್ಟ್ ಮೆಟ್ಟಿಲನ್ನು ಹತ್ತಿರುವುದು ಇದೇ ಮೊದಲ ಬಾರಿಗೆ ಎನ್ನುತ್ತಾರೆ. ನೀವು ಇಲ್ಲಿಯವರೆಗೆ ಚಿಕ್ಕಮಗಳೂರು ನಗರ ಮತ್ತು ಬಸವನಹಳ್ಳಿ ಪೊಲೀಸ್ ಠಾಣೆಗೆ ಸಂಬಂಧಿಸಿದ ಸುಮಾರು 10 ರಿಂದ 15 ಪ್ರಕರಣಗಳಲ್ಲಿ ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸರಿಯಲ್ಲ.

7. ಚಿಕ್ಕಮಗಳೂರು ಸುಪ್ರೀಂ ಮೆಡಿಕಲ್ಸ್ ಸುತ್ತಮುತ್ತ ಸಿಸಿ ಕ್ಯಾಮೆರಗಳನ್ನು ಅಳವಡಿಸಲಾಗಿದೆ ಎಂದರೆ ಸರಿ. ಪೊಲೀಸರು ಠಾಣೆಗೆ ಕರೆಯುವ ಮೊದಲು ನಾನು ನನ್ನ ಹೋಟೆಲಿನಲ್ಲಿ ಇದ್ದೆನು. ಆಗ ಚಾಸಾ.7 ರವರು ನಿಮ್ಮೊಂದಿಗೆ ಇದ್ದರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪೊಲೀಸರು ನಿಮ್ಮನ್ನು ಠಾಣೆಗೆ ಕರೆಸಿಲ್ಲ ನೀವು ನಿಮ್ಮ ಹೋಟೆಲಿನಿಂದ ನೇರವಾಗಿ ಸ್ಥಳಕ್ಕೆ ಹೋಗಿದ್ದೀರಿ ಎಂದರೆ ಸರಿಯಲ್ಲ.

8. ಬಟ್ಟೆಗಳು, ಪ್ಲಾಸ್ಟಿಕ್ ಚೀಲಗಳು ಮತ್ತು ಪ್ಲಾಸ್ಟಿಕ್ ವಸ್ತುಗಳ ಮಧ್ಯದಲ್ಲಿದ್ದ ಕಲ್ಲನ್ನು ಆರೋಪಿ ತೆಗೆದು ಹಾಜರುಪಡಿಸಿದ್ದಾಗಿ ಹೇಳಿದ್ದೀರಿ ಸದರಿ ಬಟ್ಟೆಗಳನ್ನು ಮತ್ತು ಇತರೆ ವಸ್ತುಗಳನ್ನು ಪೊಲೀಸರು ತೆಗೆದುಕೊಂಡರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಪಿ.12 ಫೋಟೋದಲ್ಲಿ ಯಾವುದೋ ವ್ಯಕ್ತಿ ಕಲ್ಲನ್ನು ತೆಗೆದು ತೋರಿಸುತ್ತಿರುವುದು ಕಂಡುಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದರಲ್ಲಿ ಕಲ್ಲನ್ನು ಅಳತೆ ಮಾಡುತ್ತಿರುವುದು ಕಂಡುಬರುತ್ತದೆ ಎನ್ನುತ್ತಾರೆ. ಕಲ್ಲನ್ನು ಅಳತೆ ಮಾಡಿದ್ದಾಗಿ ಹೇಳಿದ್ದೀರಿ ಅದರ ಅಳತೆ ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಮು.ಮಾ.6 ರಂತಹ ಕಲ್ಲುಗಳು ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲಿ ಸಿಗುತ್ತವೆ ಎಂದರೆ ಸಾಕ್ಷಿ ಅದೇ ಕಲ್ಲು ಸಿಗುವುದಿಲ್ಲ, ಮುಚ್ಚಿಟ್ಟಿದ್ದ ಅದನ್ನು ಆರೋಪಿಯೇ ತೆಗೆದು ತೋರಿಸಿದ್ದಾನೆ ಎನ್ನುತ್ತಾರೆ. ನೀವು ಹೇಳಿದಂತೆ ಆರೋಪಿ ಸದರಿ ಕಲ್ಲನ್ನು ತೆಗೆದು ತೋರಿಸಿಲ್ಲ ಮನೆ ಕಟ್ಟಲು ಬಳಸುವ ಸದರಿ ಕಲ್ಲನ್ನು ಪೊಲೀಸರು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿ ಹಾಜರುಪಡಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿ ಸದರಿ

ಕಲ್ಲನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಐ.ಜಿ. ರಸ್ತೆಯ ಎದುರಿಗೆ ಇರುವ ರಸ್ತೆಯಲ್ಲಿ ಕಾಫಿ ಹೌಸ್ ಒಂದರ ಪಕ್ಕದಲ್ಲಿದ್ದ ಸದರಿ ಕಲ್ಲನ್ನು ಆರೋಪಿ ತೆಗೆದುಕೊಂಡು ಬರುತ್ತಿರುವುದು ನಮ್ಮ ಹೋಟೆಲಿನ ಸಿಸಿ ಕ್ಯಾಮೆರದಲ್ಲಿ ರೆಕಾರ್ಡ್ ಆಗಿತ್ತು ಎನ್ನುತ್ತಾರೆ. ನೀವು ಹೇಳಿದಂತೆ ಆ ರೀತಿ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ.

9. ಮಹಜರ್ ಸಮಯದಲ್ಲಿ ಅಲ್ಲಿ ಸೇರಿದ್ದ ಸಾರ್ವಜನಿಕರ ಸಹಿಗಳನ್ನು ಪೊಲೀಸರು ಪಡೆದುಕೊಂಡರೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಹಿಂದೆ ನನಗೆ ಆರೋಪಿಯ ಪರಿಚಯ ಇರಲಿಲ್ಲ. ನೀವು ಸ್ಥಳಕ್ಕೆ ಹೋದಾಗ ಮೃತ ಮಹಿಳೆಗೆ ಸಂಬಂದಪಟ್ಟವರು ಯಾರಾದರು ಇದ್ದರೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆ ದಿನ ನೀವು ಠಾಣೆಗೆ ಹೋದಾಗ ಸಮಯ ಎಷ್ಟಾಗಿತ್ತು ಎಂದರೆ ಸಾಕ್ಷಿ ನಾನು ವಾಚನ್ನು ಕಟ್ಟುವುದಿಲ್ಲ, ಹಾಗಾಗಿ ಸಮಯವನ್ನು ಗಮನಿಸಿಲ್ಲ ಎನ್ನುತ್ತಾರೆ.

10. ಪೊಲೀಸರು ಇದೇ ರೀತಿ ಹೇಳಬೇಕೆಂದು ಹೇಳಿಕೊಟ್ಟಿದ್ದರಿಂದ ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ಮು.ಮಾ.6 ಕಲ್ಲನ್ನು ತೋರಿಸಿ ಪೊಲೀಸರಿಗೆ ಹಾಜರುಪಡಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ಕಲ್ಲಿಗೂ ಆರೋಪಿಗೂ ಸಂಬಂದವಿಲ್ಲ ಎಂದರೆ ಸರಿಯಲ್ಲ. ಆರೋಪಿ ಸದರಿ ಕಲ್ಲನ್ನು ಹಾಜರುಪಡಿಸುವ ಸಮಯದಲ್ಲಿ ಅದರ ಮೇಲೆ ಈ ದಿನ ಕಂಡುಬರುವ ಬಿಳಿಯ ಬಟ್ಟೆಯನ್ನು ನೋಡಿರಲಿಲ್ಲ.

11. ಆ ದಿನ ಠಾಣೆಯಲ್ಲಿ ನಾನು ಒಂದು ಸಹಿಯನ್ನು ಮಾಡಿದ್ದೇನೆ. ನಿಪಿ.10 ಮತ್ತು ಪಿ.11 ರಲ್ಲಿ ಏನು ಬರೆದಿದೆ ಎಂದು ನಿಮಗೆ ತಿಳಿದಿದೆಯೇ ಎಂದರೆ ಸಾಕ್ಷಿ ಪೊಲೀಸರು ಓದಿ ಹೇಳಿದ್ದರು, ಆದರೆ ಈಗ ಮರೆತಿದಿದ್ದೇನೆ ಎನ್ನುತ್ತಾರೆ. ಮು.ಮಾ.6 ಕಲ್ಲಿನ ಅಳತೆಯ ವಿವರಗಳನ್ನು ಪೊಲೀಸರು ಏನೆಂದು ಬರೆದುಕೊಂಡಿದ್ದಾರೆ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ನಿಪಿ.11 ಮತ್ತು ಮು.ಮಾ.6 ರ ಮೇಲಿರುವ ಸಹಿಯನ್ನು ನೀವು ಠಾಣೆಯಲ್ಲೇ ಮಾಡಿದ್ದೀರಿ ಎಂದರೆ ಸರಿಯಲ್ಲ.

12. ನಿಪಿ.12 ಮತ್ತು ಪಿ.13 ಫೋಟೋಗಳನ್ನು ಪೊಲೀಸರು ತೆಗೆದುಕೊಂಡಿದ್ದಾರೆ. ಯಾವ ಸಾಧನದಲ್ಲಿ ಸದರಿ ಫೋಟೋಗಳನ್ನು ತೆಗೆದಿದ್ದಾರೆ ಎಂದರೆ ಸಾಕ್ಷಿ ಮೊಬೈಲ್ ಮತ್ತು ಕ್ಯಾಮೆರ ಎರಡರಲ್ಲೂ ತೆಗೆದುಕೊಂಡರು ಎನ್ನುತ್ತಾರೆ. ಪೊಲೀಸರು ನಿಮ್ಮನ್ನು ಠಾಣೆಗೆ ಕರೆಸಿ ನಿಪಿ.10 ರಂತೆ ನೋಟೀಸನ್ನು ಜಾರಿ ಮಾಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ನೀವು ಸುಪ್ರೀಂ ಮೆಡಿಕಲ್ಸ್ ಹತ್ತಿರ ಇರುವ ಫುಟಪಾತಿನ ಹತ್ತಿರ ಹೋಗಿದ್ದಾಗಿ, ಅಲ್ಲಿ ಆರೋಪಿ ಸ್ಥಳವನ್ನು ತೋರಿಸಿದ್ದಾಗಿ, ಮು.ಮಾ.6 ಕಲ್ಲನ್ನು ಹಾಜರು ಪಡಿಸಿದ್ದಾಗಿ, ಅದನ್ನು ಪೊಲೀಸರು ನಿಪಿ.11 ರಂತೆ ಪಂಚನಾಮೆಯನ್ನು ಜರುಗಿಸಿ ಅಮಾನತು ಪಡಿಸಿಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಪೊಲೀಸರ ಮೇಲೆ ನಿಮಗೆ ವಿಶ್ವಾಸ ಇರುವ ಕಾರಣ ಅವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯನುಡಿದಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ